ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತಾರೆ.

(ಜ) ರಾಜ್ಯದ ಕಾಲೇಜುಗಳಲ್ಲಿ ಖಾಲಿಯಿರುವ ಅಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡುವುದು.

ಶ್ರೀ ಎನ್.ಯೋಗೀಶ್ ಭಟ್(ಮಂಗಳೂರು): ಮಾನ್ಯ ಅಧ್ಯಕ್ಷರೆ, ರಾಜ್ಯದ ಕಾಲೇಜುಗಳಲ್ಲಿ ಸುಮಾರು 750 ಅಧ್ಯಾಪಕರ ಹುದ್ದೆಗಳು ಖಾಲಿಯಿದ್ದು, ಭರ್ತಿ ಮಾಡಲು ಇಲ್ಲಿಯವರೆಗೆ ಪ್ರಾಮುಖ್ಯತೆ ಕೊಟ್ಟಿರುವುದಿಲ್ಲ. ಕಳೆದ ನಾಲ್ಕೈದು ವರ್ಷಗಳಿಂದ ಕೆಪಿಎಸ್‌ಸಿ ಪರೀಕ್ಷೆಯಲ್ಲೂ ಅವಕಾಶ ಕೊಟ್ಟಿಲ್ಲ. ಆದುದರಿಂದ, ಸರ್ಕಾರದಲ್ಲಿ ಈ ಮೂಲಕ ಕೇಳಿಕೊಳ್ಳುವುದೇನೆಂದರೆ, ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಈ ಸಲವಾದರೂ ಅವಕಾಶ ಕೊಟ್ಟು ಅಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ತಾವು ಕ್ರಮ ಕೈಗೊಳ್ಳುತ್ತೀರಾ? ಇದಕ್ಕೆ ಸ್ಪಷ್ಟೀಕರಣ ನೀಡಬೇಕು.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯದ ಕಾಲೇಜುಗಳಲ್ಲಿ ಅಧ್ಯಾಪಕರ ಹುದ್ದೆಗಳು ಖಾಲಿ ಇವೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ರಾಜ್ಯ ಸರ್ಕಾರವು ಕೆಪಿಎಸ್‌ಸಿಯನ್ನು ಕೇಳಬೇಕಾಗುತ್ತದೆ. ಖಾಲಿ ಇರುವ ಹುದ್ದೆಗಳು ಪ್ರಾಥಮಿಕ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಿರಬಹುದು, ಕಾಲೇಜುಗಳಿಗೆ ಸಂಬಂಧಿಸಿರಬಹುದು ಅಥವಾ ಜ್ಯೂನಿಯರ್ ಕಾಲೇಜ್ ಮತ್ತು ಫಸ್ಟ್ ಗ್ರೇಡ್ ಕಾಲೇಜುಗಳಿಗೆ ಸಂಬಂಧಿಸಿದಂತಿರಬಹುದು. ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ನಾವು ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ.

(ಞ) ಪ್ರಾಥಮಿಕ ಶಾಲಾ ಶಿಕ್ಷಕರ ಸತ್ಯಾಗ್ರಹ.

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು): ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಶಾಲಾ ಶಿಕ್ಷಕರು ಬೇಡಿಕೆಗಳು ಈಡೇರುವವರೆಗೆ ಶಾಲೆಗಳ ಬಾಗಿಲು ತೆಗೆಯುವುದಿಲ್ಲವೆಂದು ಹೇಳಿದ್ದಾರೆ. ಇದರಿಂದ ಮಕ್ಕಳಿಗೆ ತುಂಬಲಾರದ ನಷ್ಟವಾಗುತ್ತಿದೆ, ಮಕ್ಕಳ ಮನಸ್ಸಿನ ಮೇಲೆ ತುಂಬ ಕೆಟ್ಟ ಪರಿಣಾಮವಾಗುತ್ತಿದೆ. ಸರ್ಕಾರ ಈ ಮುಷ್ಕರವನ್ನು ನಿಲ್ಲಿಸುವ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿದೆಯೆ? ಆಲೋಚನೆ ಮಾಡುತ್ತಿಲ್ಲವೆಂದು ನನ್ನ ಅಭಿಪ್ರಾಯ. ಆದ್ದರಿಂದ, ಸರ್ಕಾರ ಶಿಕ್ಷಕರ ನ್ಯಾಯಯುತವಾದ ಬೇಡಿಕೆಗಳೇನಿದೆ ಅದರ ಬಗ್ಗೆ ಗಮನ ಹರಿಸಲಿ. ಬೇಗ ಶಾಲೆಗಳ ಬಾಗಿಲು ತೆರೆದು ಪಾಠಪ್ರವಚನಗಳು ಪ್ರಾರಂಭವಾಗಲಿ.

ಅಧ್ಯಕ್ಷರು: ನಾನು ತಮ್ಮೆಲ್ಲರಲ್ಲಿ ಬೇಡಿಕೊಳ್ಳುವುದೇನೆಂದರೆ ಇವುಗಳೆಲ್ಲ ಎಂಥ ಬೇಡಿಕೆಗಳು. ಬೆಂಗಳೂರಿಗೆ ಬರಲು ಆಗದೇ ಇರುವವರು, ಬೆಂಗಳೂರನ್ನು ನೋಡದೇ ಇರುವವರ ಬೇಡಿಕೆಗಳನ್ನು ನಾವು ಬಿಟ್ಟು ಬೆಂಗಳೂರಿಗೆ ಬಂದವರ ಬೇಡಿಕೆಗಳನ್ನು ನೋಡುವುದೇ ಕೆಲಸವಾಗಿದೆಯಲ್ಲ. ಸದಾಕಾಲ ನಮ್ಮ ಸಮಯವೆಲ್ಲ ಅವರುಗಳ ಬೇಡಿಕೆಗಳನ್ನು ಈಡೇರಿಸುವಲ್ಲಿ ವಿನಿಯೋಗವಾಗಿಬಿಟ್ಟರೆ ಹೇಗೆ? ಕೇವಲ ಸಂಬಳಗಾರರ ಬೇಡಿಕೆ, ಅವರು ಝಂಡಾವನ್ನು ಹಿಡಿದುಕೊಂಡು ಬರುವುದು ಆಗಿಬಿಟ್ಟರೆ ಹೇಗೆ? ಅವರುಗಳು ಸಂಘಟಿತರಾಗಿದ್ದಾರೆ, ಅಸಂಘಟಿತರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಎ.ಟಿ.ರಾಮಸ್ವಾಮಿ: ಮಕ್ಕಳ ಭವಿಷ್ಯವನ್ನು ನೋಡಬೇಕಲ್ಲ. ಶಾಲೆಗಳ ಬಾಗಿಲು ಮುಚ್ಚಿದೆ. ಅವರನ್ನು ಊರಿಗೆ ಕಳಿಸಲು ಏನಾದರೂ ವ್ಯವಸ್ಥೆ ಮಾಡಿ.

ಅಧ್ಯಕ್ಷರು: ತಮ್ಮ ಖುಷಿಗೆ ನಾನು ಅಡ್ಡಿ ಬರುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾಳೆ ಶಾಲೆಯ ಬಾಗಿಲು ತೆಗೆಸಲು ಏನಾದರೂ ಮಾಡಿದ್ದಾರಾ?

ಅಧ್ಯಕ್ಷರು: ನಮೋ ನಮ: ಇಡೀ ವಿಧಾನ ಸಭೆ ನಾಲ್ಕು ಪರ್‌ಸೆಂಟ್ ಜನರ ಬಗ್ಗೆ ಮಾತನಾಡುತ್ತಿರಲಿ, ಉಳಿದ ತೊಂಭತ್ತಾರು ಪರ್‌ಸೆಂಟ್ ಜನರು ಅಲ್ಲಿ ಬಿದ್ದಿರಲಿ. ಅಲ್ಲವೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಜೂನ್ ಮೊದಲ ತಾರೀಖಿನಿಂದ ಶಾಲೆಗಳು ಪ್ರಾರಂಭವಾಗಿದೆ. ಒಂದನೆ ತರಗತಿಯಿಂದ ಏಳನೇ ತರಗತಿಯವರೆಗೆ ಪ್ರಾಥಮಿಕ ಶಾಲೆಗಳು ಬರುತ್ತವೆ. ಇಲ್ಲಿ ಲಕ್ಷಾಂತರ ಮಕ್ಕಳ ಭವಿಷ್ಯದ ಪ್ರಶ್ನೆ ಇದೆ. ಐದನೇ ವೇತನ ಆಯೋಗದ ಶಿಫಾರಸ್ಸನ್ನು ಯಥಾವತ್ತಾಗಿ ಜಾರಿಗೆ ತರಬೇಕೆಂದು ಕೆಲವು ಬೇಡಿಕೆಗಳನ್ನು ಇಟ್ಟುಕೊಂಡು ಶಿಕ್ಷಕರು 28 ನೇ ತಾರೀಖು ಇಲ್ಲಿಗೆ ಬಂದಿದ್ದರು. ಮಾನ್ಯಗೋವಿಂದೇಗೌಡರು ಆ ಸ್ಥಳಕ್ಕೆ ಭೇಟಿ ಕೊಟ್ಟು ಮಾತನಾಡಿ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಹೇಳಿ ಬಂದಿದ್ದಾರೆ. ಆದರೆ ಅದರ ಬಗ್ಗೆ ಯಾವುದೆ ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲವೆಂದು ಈಗ ಆ ಪದಾಧಿಕಾರಿಗಳು ಐವತ್ತು ಸಾವಿರ ಶಾಲೆಗಳನ್ನು ಬಂದ್ ಮಾಡಿ ಸುಮಾರು ಎರಡು ಲಕ್ಷದ ನಲವತ್ತು ಸಾವಿರ ಶಿಕ್ಷಕರು ಕ್ಷೇತ್ರ ಶಿಕ್ಷಣಾಧಿಕಾರಿಗಳ, ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಕುಳಿತು ಧರಣಿ ಸತ್ಯಾಗ್ರಹ ಪ್ರಾರಂಭ ಮಾಡಿದ್ದಾರೆ. ಈ ಸದನ ನಡೆಯುತ್ತಿರುವ ಸಮಯದಲ್ಲಿ ನಮ್ಮ ಬೇಡಿಕೆ ಏನೆಂದರೆ ಐವತ್ತು ಸಾವಿರ ಶಾಲೆಗಳು ಇಂದು ಬಂದ್ ಆಗಿರುವ ಸಂದರ್ಭದಲ್ಲಿ ಮಕ್ಕಳ ಭವಿಷ್ಯದ ಪ್ರಶ್ನೆ ಬರುತ್ತಿದೆ. ಆದ್ದರಿಂದ, ಪಕ್ಕದ ರಾಜ್ಯಗಳಲ್ಲಿ ಯಾವ ರೀತಿ ಐದನೇ ವೇತನ ಆಯೋಗದ ಶಿಫಾರಸ್ಸುಗಳನ್ನು ತಂದಿದ್ದಾರೆ ಅದರಂತೆ

ಮಾಡಲು ಏನೇನು ಸಾಧ್ಯತೆಗಳು ಇದೆ, ಏನೇನು ಮಾಡಲು ಆಗುವುದಿಲ್ಲ, ತಾವು ಒಂದು ಸಲ ಅವರ ಹತ್ತಿರ ಹೋಗಿ ಒಪ್ಪಿಕೊಂಡು ಬಂದ ಮೇಲೆ ಇಂಥದ್ದು ಆಗುತ್ತದೆ ಇಂಥಹದ್ದು ಆಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿ. ಶಾಲೆ ಪ್ರಾರಂಭವಾಗುವ ರೀತಿ ನೋಡಿಕೊಳ್ಳಿ, ಇಲ್ಲಿಗೆ ಲಕ್ಷಾಂತರ ಶಿಕ್ಷಕರು ಬಂದರು, ಅವರ ಹತ್ತಿರ ತಾವು ಹೋಗಿ ಮಾತನಾಡಿದಿರಿ, ಸದನದಲ್ಲಿ ನಾವು ಪ್ರಸ್ತಾಪ ಮಾಡಿದೆವು, ತಾವು ಇದು ಆಗುವುದಿಲ್ಲವೆಂದು ಹೇಳಲಿಲ್ಲ, ಪರಿಶೀಲನೆ ಮಾಡುತ್ತಿದ್ದೇವೆ ಕೆಲವನ್ನು ಕಾರ್ಯರೂಪಕ್ಕೆ ತರುತ್ತೇನೆ ಎಂಬ ರೀತಿಯಲ್ಲಿ ಸದನಕ್ಕೆ ತಾವು ಭರವಸೆಯನ್ನು ಕೊಟ್ಟರಿ. ತಾವು ಮಾಡುತ್ತೀರಿ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಿದರೆ ಶಾಲೆಗಳು ಪ್ರಾರಂಭವಾಗಿ ಮಕ್ಕಳ ಭವಿಷ್ಯ ಪ್ರಶ್ನೆ ಇದೆ. ನಲವತ್ತು ಐವತ್ತು ಲಕ್ಷ ಮಕ್ಕಳು ಬೀದಿಪಾಲಾಗುತ್ತಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದ ಸ್ಪಷ್ಟವಾದ ನಿಲುವು ಏನು? ಸತ್ಯಾಗ್ರಹ ಮಾಡಿ ಈಗಾಗಲೆ ಶಾಲೆಗಳು ಬಾಗಿಲನ್ನು ಹಾಕಲಾಗಿದೆ. ಅದನ್ನು ಹಾಗೆಯೆ ಮುಂದುವರೆಯಲು ಬಿಡುತ್ತೀರೊ ಅಥವಾ ಇದಕ್ಕೆ ಪರಿಹಾರವನ್ನು ಹುಡುಕುತ್ತೀರೊ. ನಮಗೆ ಬೇಕಾಗಿರುವುದು ಇದು.

ಶ್ರೀ ಮಾಟಾಳ್‌ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಈ ಸಮಸ್ಯೆ ಯಾವುದಾದರೂ ರೂಪದಲ್ಲಿ ಬಗೆಹರಿಯಬೇಕು. ಶಿಕ್ಷಕರು ಸತ್ಯಾಗ್ರಹ ಮಾಡಲು ಪ್ರಾರಂಭ ಮಾಡಿದರು. ಶಾಲೆಗಳು ಇವತ್ತಿನಿಂದ ಬಂದ್ ಆಗಿದೆ. ಈ ಬಂದ್‌ನಿಂದ ನಾವು ಹೊರಗಡೆ ಬರಬೇಕಾದರೆ ಯಾವುದಾದರೂ ಹಂತದಲ್ಲಿ ಸಮಸ್ಯೆ ಬಗೆಹರಿಯಬೇಕಲ್ಲವೆ. ಸಮಸ್ಯೆ ಬಗೆಹರಿಯದೆ ಒಂದು ಕಡೆ ಶಾಲೆಗಳು ಬಂದ್ ಆಗಿ, ಸತ್ಯಾಗ್ರಹ ಮಾಡುತ್ತಿದ್ದರೆ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ನಾಳೆ ಏನು ಅಪಾಯ ಒದಗುತ್ತದೆ ಎಂಬುದು ಬಹಳ ಮುಖ್ಯ. ಸಮಸ್ಯೆಯನ್ನು ಬಗೆಹರಿಸಲು ತಾವು ಪ್ರಾಮಾಣಿಕ ಪ್ರಯತ್ನ ಮಾಡಿಲ್ಲವೆಂದು ನಾನು ಹೇಳುವುದಿಲ್ಲ. ಅನಿರ್ದಿಷ್ಟಕಾಲ ಇದನ್ನು ಮುಚ್ಚಿಬಿಟ್ಟರು ಎಂದು ಇಟ್ಟುಕೊಳ್ಳೋಣ, ಹಾಗಾದರೆ ಮುಂದಿನ ಗತಿಯೇನು? ಸರ್ಕಾರ ಏನು ಮಾಡಬೇಕು? ಇದಕ್ಕೆ ಪರ್ಯಾಯವೇನು ಎಂಬ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಲ್ಲವೆ? ಸರ್ಕಾರ ಏನು ಮಾಡಿದೆ?

ಅಧ್ಯಕ್ಷರು: ಸರ್ಕಾರದ ಜೊತೆ ಜೊತೆಗೆ ನಾನು ಈ ಸದನಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವುಗಳೆಲ್ಲ ಹಿರಿಯರಿದ್ದೀರಿ, ಮೇಧಾವಿಗಳಿದ್ದೀರಿ. ನಾವು ಒಂದು ವಿಷ ವರ್ತುಲವನ್ನು ಸೃಷ್ಟಿ ಮಾಡಿಬಿಟ್ಟಿದ್ದೇವೆ. ಸಂಘಟಿತರಾಗಿರತಕ್ಕವರು ಬೆಂಗಳೂರಿಗೆ ಬರತಕ್ಕದ್ದು, ಸರ್ಕಾರದ ಮೇಲೆ ಒತ್ತಡ ಹೇರತಕ್ಕದ್ದು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳತಕ್ಕದ್ದು. ಹಾಗಿದ್ದರೆ ಅಸಂಘಟಿತರ ವಿಚಾರವನ್ನು ಕೇಳುವವರು, ಮಾಡುವವರು ಯಾರು? ಆಪರೇಷನ್ ಥಿಯೇಟರ್‌ಗೆ ಹೋಗಬೇಕಾಗಿದ್ದರೆ ವೈದ್ಯರುಗಳು ಮುಷ್ಕರ ಮಾಡುವುದು, ಪರೀಕ್ಷೆಯ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಬೇಕಾಗಿದ್ದರೆ ಕಾಲೇಜು ಅಧ್ಯಾಪಕರು ಹೆದರಿಸುವುದು, ಶಾಲೆ

ಪ್ರಾರಂಭವಾಗಬೇಕಿದ್ದರೆ ಶಿಕ್ಷಕರು ಮುಷ್ಕರ ಮಾಡುವುದು. ಹಾಗಾದರೆ ಒಂದಲ್ಲ ಒಂದು ದಿವಸ ರೈತರುಗಳೆಲ್ಲ ನಾವು ಬಿತ್ತನೆ ಮಾಡುವುದಿಲ್ಲವೆಂದರೆ ಇವರುಗಳೆಲ್ಲ ಏನನ್ನು ತಿನ್ನುತ್ತಾರೆ? ನಮ್ಮಲ್ಲಿ ಬೆಳಿಗ್ಗೆ ರೈತರು ಬಂದು ಬಾಯಿಗೆ ಬಂದಂತೆ ಮಾತಾಡಿಹೋದರು. ನಮಗೆ ಒಂಭತ್ತು ದಿವಸಗಳಿಂದ ವಿದ್ಯುತ್ ಬಂದಿಲ್ಲವೆಂದು ಹೇಳಿದರು. ಅದಕ್ಕೆ ನಾನು ಏನನ್ನು ಹೇಳುವುದಕ್ಕೇ ಆಗಲಿಲ್ಲ. ನಮ್ಮ ಇಡೀ ಸದನ ಅವರ, ಇವರ ಮುಷ್ಕರದ ಬಗ್ಗೆ ಚರ್ಚೆ ಮಾಡಿದರೆ ಹೇಗೆ? ಸಂಘಟನೆ ಮಾಡಿಕೊಳ್ಳುವುದು ಸುಲಭ. ಸಂಬಳ ಸಿಗುತ್ತದೆ, ಅವರಿಗೆ ಸಂಘ ಇದೆ, ಒಂದು ಕರೆ ಕೊಡುತ್ತಾರೆ, ಒಂದಿಷ್ಟು ವಂತಿಕೆಯನ್ನು ಕೊಡಬೇಕೆಂದು ಹೇಳಿದರು. ಆದರೆ ಏನೂ ಇಲ್ಲದವನು ಇಲ್ಲಿಗೆ ಹೇಗೆ ಬರಬೇಕು? ನಮ್ಮೂರ ಕುಂಬಾರ ಬರಬೇಕು, ನಿಮ್ಮೂರ ಅಗಸ ಬರಬೇಕು, ಇನ್ನೊಂದು ಊರಿನ ಚಮ್ಮಾರ ಇಲ್ಲಿಗೆ ಬರಬೇಕೆಂದರೆ ಯಾರು ಕರೆದುಕೊಂಡು ಬರುವವರು, ಅವರ ಸಂಘವೇನಾದರು ಇದೆಯೆ, ಇಲ್ಲ. ಅವರು ವಂತಿಕೆಯನ್ನು ಕೊಡುತ್ತಾರೆಯೆ, ಅವರಲ್ಲಿ ಝಂಡಾವನ್ನು ಹಿಡಿದುಕೊಳ್ಳುವವರು ಇದ್ದಾರೆಯೆ, ಅವರುಗಳು ಇಲ್ಲಿಗೆ ಬಂದರೆ ಅವರ ಸಮಸ್ಯೆಯನ್ನು ನಾವು ಕೇಳುತ್ತೇವೆಯೆ, ತಾವು ಇದರ ಬಗ್ಗೆ ಯೋಚನೆ ಮಾಡಿ. ಈ ಸಂಘಟಿತ ವಲಯಗಳ ಸತತ ಬ್ಲಾಕ್‌ಮೇಲಿಂಗ್‌ಗೆ ಅಸಂಘಟಿತ ಜನ ಒಳಗಾಗಬೇಕೆ, ಇಡೀ ಸದನ ಬಗ್ಗಬೇಕೆ, ತಾವು ದಯಮಾಡಿ ಇದರ ಬಗ್ಗೆ ಯೋಚನೆ ಮಾಡಿ. ಈ ಸದನದ ಒಬ್ಬ ಸದಸ್ಯನಾಗಿ ಆ ವರ್ಗದ ಜನರ ನೋವನ್ನು ನೋಡಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಐವತ್ತು ಸಾವಿರ ಶಾಲೆಗಳು ಬಂದ್ ಆಗಿರತಕ್ಕ ವಿಚಾರ ಒಂದು. ಇಂದು ನಮ್ಮ ಮನೆಯಲ್ಲಿ ಬೆಳಿಗ್ಗೆ ಆದ ಪ್ರಸಂಗವೊಂದನ್ನು ತಮ್ಮ ಗಮನಕ್ಕೆ ತಂದುಬಿಡುತ್ತೇನೆ. ನಮ್ಮ ಮನೆಯ ಹತ್ತಿರ ಇಬ್ಬರು ಶಿಕ್ಷಕರ ಪ್ರತಿನಿಧಿಗಳು ಬಂದರು. ನಾನು ಮನೆಯ ಒಳಗಡೆ ಇದ್ದೆ.

ಅಧ್ಯಕ್ಷರು: ಮೊನ್ನೆ ಪತ್ರಿಕೆಗಳಲ್ಲಿ ಒಂದು ಫೋಟೊವನ್ನು ಕೊಟ್ಟಿದ್ದಾರೆ. ದಲಿತ ಸಂಘರ್ಷ ಸಮಿತಿಯವರು ಬಟ್ಟೆ ಬಿಚ್ಚಿ ಕೇವಲ ನಿಕ್ಕರ್ ಹಾಕಿಕೊಂಡು ಒಂದು ಕಡೆ ಪ್ರೊಟೆಸ್ಟ್ ಮಾಡುತ್ತಿದ್ದಾರೆ, ಅದರ ಪಕ್ಕದಲ್ಲಿಯೇ ಒಂದು ಫೋಟೊವನ್ನು ಹಾಕಿ ಅದರಲ್ಲಿ ಅರ್ಚಕರನ್ನು ತೋರಿಸಿದ್ದಾರೆ. ಅರ್ಚಕರು ಹೇಗೊ ಬಟ್ಟೆ ಹಾಕುವುದಿಲ್ಲ, ಒಂದು ವಸ್ತ್ರವನ್ನು ಹಾಕಿಕೊಂಡಿರುತ್ತಾರೆ. ಆ ಎರಡೂ ಫೋಟೊಗಳನ್ನು ಅಕ್ಕಪಕ್ಕದಲ್ಲೇ ಹಾಕಿದ್ದಾರೆ. ಅಂದರೆ it is an education to us. It is an eye-opener to us ಎಲ್ಲಿಗೆ ಬಂದಿದೆ ನೋಡಿ ಎಂದು ನಮಗೆ ತಿಳುವಳಿಕೆ ಕೊಡತಕ್ಕದ್ದಾಗಿದೆ. ಇದು ಪ್ಯಾರಡಾಕ್ಸ್, ವಿಪರ್ಯಾಸ. ಮೂರು ಸಾವಿರ ಬರುವವರಿಗೆ ಆರು ಸಾವಿರ ಬರಬೇಕು.

ಶ್ರೀ ವಾಟಾಳ್‌ನಾಗರಾಜ್: ಬೆಳಿಗ್ಗೆ ನಡೆದ ಕತೆಯನ್ನು ತಮಗೆ ಹೇಳುತ್ತೇನೆ.

ಇಬ್ಬರು ಸತ್ಯಾಗ್ರಹ ಮಾಡುತ್ತಿರುವ ಮುಖಂಡರು ನಮ್ಮ ಮನೆಗೆ ಬಂದಿದ್ದರು. ನಾನು ಒಳಗೆ ದೂರವಾಣಿಯಲ್ಲಿ ಮಾತನಾಡುತ್ತ ನಿಂತಿದ್ದೆ. ನಾನು ಬರುವುದು ಒಂದು ಗಂಟೆಯಾಗುತ್ತದೆ, ಅವರಿಗೆ ಹೇಳಿ ಎಂದೆ. ಅವರು ಕರೆದ ತಕ್ಷಣ ನಾನು ಎದ್ದು ಹೋಗುವ ಮಟ್ಟದಲ್ಲಿ ಇರಲಿಲ್ಲ. ಅವರು ಹೊರಗಡೆ ಹೋಗುವಾಗ ನಾವು ಸತ್ಯಾಗ್ರಹ ಮಾಡುವ ಹತ್ತಿರವೆ ಅವರನ್ನು ಬರಹೇಳಿಬಿಡಿ ಎಂದು ಹೇಳಿ ಹೋಗುತ್ತಾರೆ. ಇಂಥ ಭಾವನೆ ಅವರಲ್ಲಿ ಇದೆ. ಐವತ್ತು ಸಾವಿರ ಶಾಲೆಗಳು ಬಂದ್ ಆಗಿರುವ ಬಗ್ಗೆ ಚಿಂತನೆ ಆಗಬೇಕು. ಇದರ ಬಗ್ಗೆ ನಾನು ಕೇಳುತ್ತಿರುವುದು.

ಅಧ್ಯಕ್ಷರು: ನಾನು ಇಡೀ ಸದನವನ್ನು ವಿನಂತಿ ಮಾಡಿಕೊಳ್ಳುತ್ತೇನೆ, ವಿಷಯವನ್ನು ಆಡಳಿತ ಪಕ್ಷ, ವಿರೋಧ ಪಕ್ಷವೆಂದು ಸೀಮಿತಗೊಳಿಸಬೇಡಿ. ಇಡೀ ಸದನ ಜನತೆಯ ಪರವಾಗಿ ನಾವುಗಳು ಎಲ್ಲೋ ಒಂದು ಕಡೆ ಆತ್ಮವಲೋಕನ ಮಾಡಿಕೊಳ್ಳೋಣ. ಶುದ್ಧ ಅಂತಃಕರಣದಿಂದ ಇಂಥ ಯಾವುದೇ ಸಂದರ್ಭ ಬರಲಿ ನಾವು ಇದನ್ನು ಹೇಗೆ ಎದುರಿಸಬೇಕು ಎಂಬ ನಿಲುವನ್ನು ದೃಢವಾಗಿ ತಾಳಬೇಕಾಗುತ್ತದೆ. ಹೋರಾಟ ಮಾಡುತ್ತಿರುವವರೆಲ್ಲ ನಮ್ಮವರೆ. ಅವರ ಬಗ್ಗೆ ನಮಗೆ ಗೌರವ, ವಿಶ್ವಾಸವಿದೆ. ಆದರೆ ಇದಕ್ಕೆಲ್ಲ ನಾವು ಎಲ್ಲೊ ಒಂದು ಕಡೆ ತೆರೆ ಎಳೆಯಬೇಕಲ್ಲವೆ? ಇದನ್ನು ಕೊನೆಗಾಣಿಸಬೇಕಲ್ಲವೆ? ದಯಮಾಡಿ ಸ್ವಲ್ಪ ಆಲೋಚನೆ ಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾವು ಇಲ್ಲಿ ಆದರ ಬಗ್ಗೆ ಅಂದು ಪ್ರಸ್ತಾಪ ಮಾಡಿದೆವು. ಮಾನ್ಯ ಗೋವಿಂದೇಗೌಡರು ಶಿಕ್ಷಕರನ್ನು ಭೇಟಿ ಮಾಡಿ ಸಮಸ್ಯೆಗೆ ಪರಿಹಾರ ಹುಡುಕುತ್ತೇವೆಂದು ಅಂದು ಹೇಳಿದ್ದರು. ಅವರು ಅಲ್ಲಿ ಮಾತನಾಡಿಕೊಂಡು ವಾಪಸ್ ಸದನಕ್ಕೆ ಬಂದು ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಲ್ಲವೆ? ಅದನ್ನು ಅವರು ಮಾಡಿಲ್ಲ. ಈಗ ಶಾಲೆಯನ್ನು ಬಂದ್ ಮಾಡಿ ಅವರು ಮತ್ತೆ ಸತ್ಯಾಗ್ರಹ ಕುಳಿತುಕೊಳ್ಳುವುದಾದರೆ, ಅನಂತರ ಸಮಸ್ಯೆಯನ್ನು ಬಗೆಹರಿಸುವುದಾದರೆ, ಒಂದು ತಿಂಗಳ ಗಟ್ಟಲೆ ಶಾಲೆ ಮುಚ್ಚಿರುತ್ತದೆ. ಅನಂತರ ಅವರಿಗೆ ಹೆಚ್ಚಿಗೆ ಸಂಬಳ ಕೊಡುವಂಥದ್ದು, ಮಕ್ಕಳ ಭವಿಷ್ಯ ಹಾಳು ಮಾಡತಕ್ಕದ್ದು. ಆದ್ದರಿಂದ ಶಾಲೆ ಪ್ರಾರಂಭ ಮಾಡಲು ಏನು ಮಾಡುತ್ತೀರಿ? ಇದರ ಬಗ್ಗೆ ಸ್ಪಷ್ಟವಾದ ನಿಲುವನ್ನೇನು ತೆಗೆದುಕೊಂಡಿದ್ದೀರಾ? ಅವರುಗಳಿಗೆ ನ್ಯಾಯಬದ್ಧವಾಗಿ ನಿಜವಾಗಿಯು ಏನಾದರೂ ಪರಿಹಾರವನ್ನು ಕೊಡಬೇಕಾಗಿದ್ದರೆ ಕೊಟ್ಟುಬಿಡಿ. ಕೊಡುವುದೇನಾದರು ಇದ್ದರೆ ಕೊಡುವುದಾಗಿ ಗೋವಿಂದೇಗೌಡರು ಹೇಳಿದ್ದಾರೆ. ಬೇರೆ ರಾಜ್ಯಗಳಲ್ಲೆ ಇದೆ, ನಾವು ಏನು ಕೊಡಬಹುದು, ಕೊಡುವುದಾಗಿದ್ದರೆ ಕೊಡತಕ್ಕ ಸೌಲಭ್ಯಗಳನ್ನು ಕೊಡಿ. ಅವರುಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಲಿ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ನಾವು ಏನು ಮಾಡಿದ್ದೇವೆ ಎಂಬ ಬಗ್ಗೆ ಹೇಳುತ್ತೇನೆ. ಮತ್ತೆ ಏನು

ಮಾಡಬೇಕು ಎಂಬ ಬಗ್ಗೆ ನಾವೆಲ್ಲ ಕುಳಿತು ಮಾತನಾಡೋಣ, ಹಣಕಾಸು ಸಚಿವರು ಇದ್ದಾರೆ. ಈಗಾಗಲೆ ಈ ಬಗ್ಗೆ ಶಿಕ್ಷಕರ ಕ್ಷೇತ್ರದ ಶಾಸಕರ ಹಾಗೂ ಅಧಿಕಾರಿಗಳ ಜೊತೆ ಎರಡು ಸಭೆಗಳು ಆಗಿದೆ. ಇಂದು ಬೆಳಿಗ್ಗೆ ಹನ್ನೊಂದು ಗಂಟೆಯಿಂದ ಇಲ್ಲಿಯವರೆಗೆ ನಾನು ಅಧಿಕಾರಿಗಳ ಜೊತೆ ಸಮಸ್ಯೆಯ ಬಗ್ಗೆ ಚರ್ಚೆಮಾಡಿದ್ದೆನೆ. ಶಿಕ್ಷಕರ ಸಂಘದವರನ್ನು ಇಂದು ಸಂಜೆ ನಾಲ್ಕು ಗಂಟೆಗೆ ಚರ್ಚೆ ಮಾಡಲು ಆಹ್ವಾನಿಸಿದ್ದೇನೆ. ಇವರ ಬೇಡಿಕೆ ಈಡೇರಿಸಲು ಬಹಳ ಆರ್ಥಿಕ ಹೊರೆಯನ್ನು ಹೊರಬೇಕಾಗುತ್ತದೆ. ಒಂದೆರಡು ಕೋಟಿಗಳಲ್ಲ. ಅವರು ಕೇಳಿದ್ದನ್ನೆಲ್ಲ ಮಾಡಲು ಕೋಟಿಗಟ್ಟಲೆ ಹಣ ಬೇಕಾಗುತ್ತದೆ. ಬಹಳಷ್ಟು ಆರ್ಥಿಕ ಹೊರೆ ಬರುವುದರಿಂದ ಧೀರ್ಘವಾಗಿ ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಅವರುಗಳು ಏನು ಹೇಳಿದ್ದಾರೆ ಅದರ ಬಗ್ಗೆ ನಾನು ಈಗಲೇ ತೀರ್ಮಾನ ತೆಗೆದುಕೊಂಡು ಹೇಳತಕ್ಕ ಪರಿಸ್ಥಿತಿಯಲ್ಲಿ ಇಲ್ಲದಿರುವುದರಿಂದ ಸ್ವಲ್ಪ ತಡವಾಗಿದೆ. ಐವತ್ತು ಸಾವಿರ ಶಾಲೆಗಳನ್ನು ಮುಚ್ಚಿರುವುದು ನಿಜ. ಎರಡು ಲಕ್ಷದ ನಲವತ್ತು ಸಾವಿರ ಮಕ್ಕಳು ಶಾಲೆಗೆ ಹೋಗಲು ಸಾಧ್ಯವಾಗದಿರುವುದು ನಿಜ. ಇಲ್ಲಿ ಎಲ್ಲರೂ ಸಾಮೂಹಿಕವಾಗಿ ಯೋಚನೆ ಮಾಡುವ ಪರಿಸ್ಥಿತಿ ಉದ್ಭವವಾಗಿದೆ. ಕೂಡಲೇ ಏನು ಮಾಡಲು ಆಗದಿದ್ದರೂ ಈಗಾಗಲೇ ಎರಡು ಸಭೆಗಳನ್ನು ಮಾಡಿದ್ದೇವೆ. ಇಂದು ಸಂಜೆ ಅವರುಗಳನ್ನು ಕರೆಸಿ ಈ ರೀತಿ ಮಾಡಲು ಸಾಧ್ಯವಿಲ್ಲವೆಂಬ ಬಗ್ಗೆ ಅವರ ಜೊತೆ ಚರ್ಚೆ ಮಾಡಿ ತಮಗೆ ತಿಳಿಸುತ್ತೇನೆ. ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ದಯವಿಟ್ಟು ಎಲ್ಲಾ ಉಪಾಧ್ಯಾಯರುಗಳು ತಮ್ಮ ತಮ್ಮ ಕೆಲಸಕ್ಕೆ ಹಾಜರಾಗತಕ್ಕ ರೀತಿಯಲ್ಲಿ ಆದೇಶ ಕೊಡಬೇಕು. ಮಕ್ಕಳ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಅವರೂ ಜವಾಬ್ದಾರಿ ಸ್ಥಾನದಲ್ಲಿ ಇರುವುದರಿಂದ ಎಲ್ಲ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಂಡು ಎಲ್ಲ ಉಪಾಧ್ಯಾಯರುಗಳು ನಾಳೆಯಿಂದ ಶಾಲೆಗೆ ಹೋಗತಕ್ಕ ಕಾರ್ಯಕ್ರಮ ಮಾಡಬೇಕು ಎಂದು ಈ ಶಾಸನ ಸಭೆಯ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕ) ರಾಷ್ಟ್ರೀಯ ಕ್ರೀಡಾಕೂಟಗಳು ಮುಗಿದಿದ್ದರೂ ಗುತ್ತಿಗೆದಾರರಿಗೆ ಕೊಡಬೇಕಾದ ಹಣ ಕೊಡದೇ ಇರುವುದು.

ಶ್ರೀ ಜಿ.ಬಿ.ಶಿವಕುಮಾರ್ (ಕೆರಗೋಡು): ಮಾನ್ಯ ಅಧ್ಯಕ್ಷರೆ, ಎರಡು ರಾಷ್ಟ್ರೀಯ ಕ್ರೀಡಾಕೂಟಗಳು ಮುಗಿದಿದ್ದರೂ, ಬೆಂಗಳೂರು ನಗರದಲ್ಲಿ ನಿರ್ಮಾಣ ಮಾಡಿರುವ ಕಟ್ಟಡದ ಗುತ್ತಿಗೆದಾರರಿಗೆ ಯೋಜನಾ ಇಲಾಖೆಯಿಂದ ಕೋಟ್ಯಾಂತರ ರೂಪಾಯಿಗಳು ಬಾಕಿ ಬರಬೇಕಾಗಿದ್ದು, ಆ ಗುತ್ತಿಗೆದಾರರು ತೊಂದರೆಗೊಳಗಾಗಿದ್ದಾರೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ, ಆರ್ಬಿಟ್ರೇಷನ್